**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.ನ್ಯಾಯಾಲಯ, ಪಾವಗಡ**

**ಸಿ.ಸಿ.1241/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮನು ಕುಮಾರ್ | ಚಾ ಸಾ- 16 |
| ತಂದೆಯ ಹೆಸರು | - | ಹನುಮಂತರಾಯಪ್ಪ | ಪ್ರಾ ಸಾ -15 |
| ವಯಸ್ಸು | - | 25 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ತಿಪ್ಪಗಾನಹಳ್ಳಿ | |

ದಿನಾಂಕಃ 27.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ನಾನು ಆರೋಪಿಯನ್ನು ಮಹಜರ್ ಗೆ ಬಂದ ಸಮಯದಲ್ಲಿ ನೋಡಿದ್ದೇನೆ. ನಿಪಿ-12 ರ ಮೇಲಿರುವ ತನ್ನ ಸಹಿಯನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ-12(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು 2020 ನೇ ವರ್ಷದಲ್ಲಿ ಪೊಲೀಸರು ಮಹಜರ್ ಗೆ ಬಂದ ಸಮಯದಲ್ಲಿ ಚಾಸಾ-1 ರವರ ಮನೆಯ ಹತ್ತಿರ ಸಹಿ ಮಾಡಿದ್ದೇನೆ. ಚಾಸಾ-1 ರವರ ಮನೆಯಲ್ಲಿ ಕಳ್ಳತನವಾದ ವಿಚಾರಕ್ಕೆ ಮಹಜರ್ ಮಾಡುವ ಸಮಯದಲ್ಲಿ ಸದರಿ ಸಹಿಯನ್ನು ಮಾಡಿರುತ್ತೇನೆ. ಸದರಿ ಮಹಜರ್ ಸಮಯದಲ್ಲಿ ನಾನು ಮತ್ತು ಚಾಸಾ-1, 3 ಮತ್ತು 15 ರವರು ಇದ್ದರು. ಸದರಿ ಮಹಜರ್ ಅನ್ನು ಸುಮಾರು 12.30 ರಿಂದ 1.00 ಗಂಟೆಯತನಕ ಜರುಗಿಸಲಾಯಿತು. ಸಾಕ್ಷಿಗೆ ನಿಪಿ-13 ರ ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ತಮ್ಮ ಇರುವಿಕೆಯನ್ನು ಗುರುತಿಸಿ ಸದರಿ ಭಾವಚಿತ್ರವನ್ನು ಚಾಸಾ-1 ರವರ ಮನೆಯ ಬಳಿ ಮಹಜರ್ ಗೆ ಬಂದ ಸಮಯದಲ್ಲಿ ತೆಗೆಯಲಾಯಿತು ಎಂದು ನುಡಿಯುತ್ತಾರೆ. ನಿಪಿ-12 ರ ಮಹಜರ್ ನ ಸಮಯದಲ್ಲಿ ಇದ್ದ ಒಬ್ಬ ಆರೋಪಿಯು ನ್ಯಾಯಾಲಯದಲ್ಲಿ ಇಂದು ಇದ್ದಾರೆ. ಇನೋರ್ವ ಆರೋಪಿಯನ್ನು ನೋಡಿದರೆ ನಾನು ಗುರುತಿಸಬಲ್ಲೆ.

**<u>ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ ಪಿ.ಹೆಚ್.ಎಸ್. ವಕೀಲರಿಂದಃ</u>**

ನಾನು ವ್ಯವಸಾಯವನ್ನು ಮಾಡುತ್ತೇನೆ. ಚಾಸಾ-1 ನನ್ನ ಆಪ್ತ ಸ್ನೇಹಿತ ಎಂದರೆ ಸರಿ. ನಿಪಿ-12ರ ಮಹಜರ್ ಗೆ ಪೊಲೀಸರು ಬಂದ ಸಮಯದಲ್ಲಿ ನಾನು ಮತ್ತು ಚಾಸಾ-15 ದೇವಸ್ಥಾನದ ಬಳಿ ಕುಳಿತಿದ್ದು ಪೊಲೀಸರು ನಮ್ಮನ್ನು ಮಹಜರ್ ಗೆ ಎಂದು ಕರೆದಾಗ ನಾವು ಹೋದೆವು. ಪೊಲೀಸರೊಟ್ಟಿಗೆ ಬಂದ ಆರೋಪಿಗಳು ಮಾಸ್ಕ್ ಧರಿಸಿದ್ದು ಯಾರೆಂದು ಗುರುತಿಸಲಾಗಲಿಲ್ಲ ಎಂದರೆ ಸರಿ. ನಿಪಿ-12ರ ಮಹಜರ್ ನಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆ ಮೇರೆಗೆ ಸಹಿಯನ್ನು ಮಾಡಿದ್ದೇನೆ. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ ಮತ್ತು ಚಾಸಾ-1 ನನ್ನ ಸ್ನೇಹಿತರಾದ ಕಾರಣದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.